ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.

ಸಿ.ಸಿ. ನಂಃ 710 /2021

| | | |
|---|---|---|
| ಸಾಕ್ಷಿದಾರರ ಹೆಸರುಃ | ಮಂಜುನಾಥ | ಪ್ರಮಾಣ ವಚನ ಭೋದಿಸಿದ ದಿನಾಂಕಃ 25-01-2024 |
| ತಂದೆಯ/ಗಂಡನ ಹೆಸರುಃ | ಸಿದ್ದಪ್ಪ ಕುರಿ | ಸಿ.ಡಬ್ಲ್ಯೂಃ1 |
| ವಯಸ್ಸುಃ | 35 ವರ್ಷ | ಪಿ.ಡಬ್ಲ್ಯೂಃ1 |
| ಉದ್ಯೋಗಃ | ಪಿ ಎಸ್ ಐ | |
| ವಾಸಸ್ಥಳಃ | ಶಿರಾಳಕೊಪ್ಪ | |

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ**

ನಾನು 29-02-2020 ರಿಂದ 30-03-2021 ರವರೆಗೆ ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ಈ ಅವದಿಯಲ್ಲಿ ದಿಃ 21-04-2020 ರಂದು ಮುಂಜಾನೆ 5 ಗಂಟೆಗೆ ನಾನು ಮತ್ತು ನನ್ನ ಠಾಣಾ ಸಿಬ್ಬಂದಿಗಳಾದ ಚಾಸಾ-5 ಮತ್ತು 6 ರವರ ಜೊತೆಯಲ್ಲಿ ಇಲಾಖ ವಾಹನದಲ್ಲಿ ಗಸ್ತಿನಲ್ಲಿದ್ದಾಗ ಠಾಣಾ ವ್ಯಾಪ್ತಿಯ ಶಿವಗಂಗಾ ಗ್ರಾಮದ ಹತ್ತಿರ ಹೊಸದಾಗಿ ನಿರ್ಮಾಣವಾಗುತ್ತಿರುವ ಶಾಲೆಯ ಬಳಿ ಅಂದರೆ ಎನ್ ಹೆಚ್ -13 ರಸ್ತೆಯ ಬಳಿ ಒಂದು ಸರ್ಕಾರಿ ಅಂಬುಲೆನ್ಸ ಹಾಗೂ ಒಂದು ಓಮಿನಿ ನಿಂತಿದ್ದು ಅನುಮಾನಗೊಂಡ ನಾವುಗಳು ಜೀಪಿನಿಂದ ಇಳಿದು ನೋಡಿದಾಗ ಅಂಬುಲೆನ್ಸ ನಲ್ಲಿನ ಮದ್ಯದ ಬಾಕ್ಸಗಳನ್ನು ಓಮಿನಿ ವಾಹನಕ್ಕೆ ತುಂಬುತ್ತಿರುವುದು ಕಂಡುಬಂದಿದ್ದು ನಾನು ಮತ್ತು ಠಾಣಾ ಸಿಬ್ಬಂದಿಗಳು ಸದರಿ ಎರಡೂ ವಾಹನಗಳಲ್ಲಿ ಇದ್ದ ವ್ಯಕ್ತಿಗಳನ್ನು ಹಿಡಿದು ಹೆಸರು ವಿಳಾಸ ಕೇಳಲಾಗಿ ಒಬ್ಬನು ಗಿರೀಶ ತಂದೆ ಲೇಟ್ ಸಿದ್ದಪ್ಪ ಇನ್ನೊಬ್ಬ ಜೀವನ ತಂದೆ ಶಿವಕುಮಾರ ಸದರಿ ಈತನು ಕೆಎ -51-ಎಂ ಎಲ್ -7603 ಓಮಿನಿ ವಾಹನದ ಚಾಲಕ ನಂತರ ಇನ್ನೊಬ್ಬನ ಹೆಸರು ಕೇಳಿದಾಗ ಸುಬಾನ್ ತಂದೆ ಪಜಲ್ ಖಾನ್ ಸದರಿ ಈತನು ಹೆಚ್ ಡಿ ಪುರದ ಪ್ರಾಥಮಿಕ ಅರೋಗ್ಯ ಕೇಂದ್ರದ ಸರ್ಕಾರಿ ಅಂಬುಲೆನ್ಸ ಕೆಎ 16-ಜಿ -0591 ಅಂಬುಲೆನ್ಸನ ಚಾಲಕನಾಗಿದ್ದು ನಂತರ ಇನ್ನೊಬ್ಬನ ಹೆಸರು ಕೇಳಲಾಗಿ ಸಂತೋಷ ತಂದೆ ಮಂಜಪ್ಪ ಸದರಿ ಈತನು ಹೊಳಲ್ಕೆರೆ ತಾಲ್ಲೂಕು ಆಸ್ಪತ್ರೆಯಲ್ಲಿ ಲ್ಯಾಬ್ ಟೆಕ್ನಿಶಿಯನ್ ಎಂದು ಹೇಳಿಕೊಂಡಿರುತ್ತಾರೆ. ಸುಬಾನ್ ಮತ್ತು ಸಂತೋಷ ಸರ್ಕಾರಿ ಆಸ್ಪತ್ರೆಯಲ್ಲಿ ಅರೆ ಸರ್ಕಾರಿ ನೌಕರರಾಗಿದ್ದು ಅಕ್ರಮ ಮದ್ಯ ಸಾಗಾಣಿಕೆಗೆ ಸರ್ಕಾರಿ ಅಂಬುಲೆನ್ಸ ಅನ್ನು ಬಳಸಿಕೊಂಡಿದ್ದು ಕಂಡು ಬಂತು ಹಾಗೆಯೇ ಗಿರೀಶ ಮತ್ತು ಜೀವನ ರವರುಗಳು ಓಮಿನಿ ವಾಹನವನ್ನು ಈ ಅಕ್ರಮ ಮದ್ಯ ಸಾಗಾಣಿಕೆಗೆ ಬಳಸಿಕೊಂಡಿದ್ದು ಕಂಡುಬರುತ್ತದೆ ಇದಲ್ಲದೆ ಕರ್ನಾಟಕ ಸರ್ಕಾರ ಲಾಕ್ ಡೌನ ಆದೇಶ ಜಾರಿಗೆ ತಂದಿದ್ದರು ಸಹ ಅದನ್ನು ಉಲ್ಲಂಘನೆ

ಮಾಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ ಸದರಿ ವ್ಯಕ್ತಿಗಳ ಮೇಲೆ ಮುಂದಿನ ಕಾನೂನು ಕ್ರಮಕ್ಕಾಗಿ ಸ್ಥಳದಲ್ಲಿ ವರದಿ ತಯಾರಿಸಿ ಠಾಣಾ ಪಿಸಿ ಮನೋಹರ ರವರ ಮೂಲಕ ಕಳುಹಿಸಿರುತ್ತೇನೆ. ಸದರಿ ವರದಿಯನ್ನು ನಿಪಿ-1 ಎಂದು ಗುರುತಿಸಲಾಯಿತು ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

ಸದರಿ ವರದಿ ಆದಾರದ ಮೇಲೆ ಚಿತ್ರಹಳ್ಳಿಗೇಟ್ ಪಿ ಎಸ್ ಮೊಕದ್ದಮೆ ಸಂಖ್ಯೆ44/2020 ರಲ್ಲಿ ಕಲಂ 269 ಐಪಿಸಿ , 32 ಮತ್ತು 34 ಕೆ.ಇ ಆಕ್ಟ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುವುದು ತಿಳಿದುಬಂದಿರುತ್ತದೆ .

ನಂತರ ಅದೇ ದಿನ ಬೆಳಗ್ಗೆ 6.15 ಗಂಟೆಗೆ ಅದೇ ರಸ್ತೆಯಲ್ಲಿ ಹಾದುಹೋಗುತ್ತಿದ್ದ ಕಾಟಲಿಂಗಪ್ಪ ತಂದೆ ರಂಗಪ್ಪ, ರಂಗಸ್ವಾಮಿ ತಂದೆ ನಿಂಗಪ್ಪ ಅವರುಗಳನ್ನು ಬರಮಾಡಿಕೊಂಡು ಸದರಿ ವಿಚಾರವನ್ನು ತಿಳಿಸಿ ಮುಂದಿನ ಕಾನೂನು ಕ್ರಮಕ್ಕೆ ಅನುವು ಮಾಡಿಕೊಡಲು ಪಂಚರಾಗಿ ಬರಲು ಕೇಳಿಕೊಂಡಾಗ ಅವರು ಒಪ್ಪಿಕೊಂಡಿರುತ್ತಾರೆ. ನಂತರ ಸದರಿ ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿ ಅಂಬುಲೆನ್ಸ ವಾಹನದಲ್ಲಿದ್ದ 10 ಮದ್ಯದ ಬಾಕ್ಸಗಳನ್ನು ಹಾಗೂ ಓಮಿನಿ ವಾಹನದಲ್ಲಿದ್ದ 4 ಮದ್ಯದ ಬಾಕ್ಸಗಳನ್ನು ವಶಪಡಿಸಿಕೊಂಡು ಮುಂದಿನ ಎಫ್ ಎಸ್ ಎಲ್ ಪರೀಕ್ಷೆಗಾಗಿ ಪ್ರತಿಯೊಂದು ಬಾಕ್ಸನ್ನು ಪ್ರತ್ಯೇಕವಾಗಿ ಒಂದು ಬಿಳಿ ಪ್ಲಾಸ್ಟಿಕ ಚೀಲದಲ್ಲಿ ಹಾಕಿ ಪ್ರೊ ಎಂಬ ಇಲಾಖಾ ಸೀಲು ಹಾಕಿ ಪಂಚರುಗಳು ಮತ್ತು ಸದರಿ ಆರೋಪಿಗಳ ಸಹಿಯನ್ನು ಪಡೆದು ನಂತರ ಪಂಚನಾಮೆ ಸಮಯದಲ್ಲಿ ಓಮಿನಿ ಮತ್ತು ಅಂಬುಲೆನ್ಸ ವಾಹನವನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ . ನಂತರ ಆರೋಪಿತರನ್ನು ವಶಕ್ಕೆ ಪಡೆದುಕೊಂಡಿದ್ದು ಸದರಿ ಪಂಚನಾಮೆಯನ್ನು ಬೆಳಗ್ಗೆ 6.15 ರಿಂದ 7.45 ವರೆಗೆ ಮಾಡಿ ಮುಗಿಸಿರುತ್ತೇನೆ. ಸ್ಥಳದಲ್ಲಿ ಪೊಟೊಗ್ರಾಪಿ ಮಾಡಿ ಕಚ್ಚಾ ನಕಾಶೆಯನ್ನು ತಯಾರಿಸಿದೆನು. ನಂತರ ಸಮಯ 8.15 ಕ್ಕೆ ಆರೋಪಿ ಮತ್ತು ಮಾಲುಗಳ ಸಹಿತ ಠಾಣಾ ಎಸ್ ಹೆಚ್ ಓ ರವರಿಗೆ ಮುಂದಿನ ಕ್ರಮಕ್ಕಾಗಿ ವಹಿಸಿಕೊಟ್ಟಿರುತ್ತೇನೆ. ಈಗ ನಾನು ಸದರಿ ಪಂಚನಾಮೆ ನೋಡುತಿದ್ದು ಅದೇ ಇರುತ್ತದೆ. ಸದರಿ ಪಂಚನಾಮೆಯನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಪಂಚರ ಮತ್ತು ಆರೋಪಿತರ ಸಹಿ ನೋಡುತಿದ್ದು ಗುರುತಿಸುತ್ತೇನೆ. ದಸ್ತುರರಾದ ಪಿ ಸಿ ತಿಮ್ಮೇಶರವರ ಸಹಿ ಇದ್ದು ಗುರುತಿಸುತ್ತೇನೆ. ಸ್ಥಳದಲ್ಲಿ ತೆಗೆದ ಪೊಟೊಗಳನ್ನು ನೋಡುತಿದ್ದು ನಿಪಿ-3 ರಿಂದ 8 ಎಂದು ಗುರುತಿಸಲಾಯಿತು. ಸಿಡಿಯನ್ನು ನಿಪಿ-9 ಮತ್ತು 10 ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ . ಈಗ ನೋಡುತ್ತಿರುವ ಚೀಲಗಳಲ್ಲಿರುವ ಮದ್ಯದ ಬಾಕ್ಸಗಳು ಅವೇ ಇರುತ್ತವೆ ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಒಟ್ಟಾಗಿ ಮು.ಮಾ-1 ಎಂದು ಬಾಕ್ಸಗಳನ್ನು ಗುರುತಿಸಲಾಯಿತು. ಚೀಲಗಳನ್ನು ಒಟ್ಟಾಗಿ ಮು.ಮಾ-2 ಎಂದು ಗುರುತಿಸಲಾಯಿತು. ಆರೋಪಿ 1 ರಿಂದ 4 ರವರನ್ನು ನ್ಯಾಯಾಲಯದ ಮುಂದೆ ನೋಡುತಿದ್ದು ಗುರುತಿಸುತ್ತೇನೆ .

ದಿಃ29-04-2020 ರಂದು ಸದರಿ ಪ್ರಕರಣಕ್ಕೆ ಸಂಬಂದಿಸಿದಂತೆ ಮರುಹೇಳಿಕೆ ನೀಡಿದ್ದು ಈ

5 ನೇ ಆರೋಪಿಯಾದ ರಾಜು ಅಲಿಯಾಸ ನರಸಿಂಹರಾಜು ತಂದೆ ತಿಪ್ಪೇಸ್ವಾಮಿ ರವರು ಚಳ್ಳಕರೆ



ದೊಡ್ಡಉಳ್ಳಾರ್ತಿ ಗ್ರಾಮದಲ್ಲಿ ಇರುವ ತಮ್ಮ ಮನೆಯಿಂದ ಈ ಸದರಿ 14 ಮದ್ಯದ ಬಾಕ್ಸಗಳನ್ನು ಅಂಬುಲೆನ್ಸ ವಾಹನಕ್ಕೆ ತುಂಬಿ ಕಳುಹಿಸಿರುವುದು ತಿಳಿದ ಮೇರೆಗೆ ಈ ದಿನ ಮರು ಹೇಳಿಕೆ ನೀಡಿರುತ್ತೇನೆ . ಸದರಿ ಆರೋಪಿಯನ್ನು ನೋಡುತಿದ್ದು ಗುರುತಿಸುತ್ತೇನೆ .

**<u>ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ವಕೀಲರಿಂದಃ</u>**

ದಿಃ21-04-2020 ರಂದು ಗಸ್ತು ಮಾಡುತಿದ್ದಾಗಿ ಹೇಳಿದ್ದು ಅದು ಚಿತ್ರದುರ್ಗ - ಹೊಳಲ್ಕೆರೆ -ಶಿವಮೊಗ್ಗ ರಸ್ತೆಯಾಗಿರುತ್ತದೆ. ಅದು ಹೊಳಲ್ಕೆರೆಯಿಂದ ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣೆಗೆ ಸುಮಾರು 13 ಕಿ ಮೀ ಆಗುತ್ತದೆ ಎಂದರೆ ಇರಬಹುದು. ನಾನು ಹೇಳಿದ ಸ್ಥಳದಿದಂದ ಶಿವಗಂಗ ಗ್ರಾಮ 5 ಕಿಮೀ ಅಂತರ ಆಗುತ್ತದೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಕೋವಿಡ್ -19 ಲಾಕ್ ಡೌನ್ ಇತ್ತು ಎಂದು ಹೇಳಿದ ಸಮಯದಲ್ಲಿ ಸಾಮಾನ್ಯವಾಗಿ ವಾಹನಗಳು ಬಹಳ ವಾಹನಗಳು ವಿರಳವಾಗಿ ಓಡಾಡುತಿದ್ದವು ಎಂದರೆ ಸರಿ .

ನಾನು ಹೇಳಿದ ದೊಡ್ಡಉಳ್ಳಾರ್ತಿ ಗ್ರಾಮ ಚಳ್ಳಕರೆ ತಾಲ್ಲೂಕಿಗೆ ಸೇರಿದೆ ಎಂದರೆ ಸರಿ, ಚಿತ್ರಹಳ್ಳಿ ಗೇಟ್‌ಗೆ ಬರಬೇಕಾದಲ್ಲಿ ದೊಡ್ಡಉಳ್ಳಾರ್ತಿ ಗ್ರಾಮದಿಂದ, ಮೊದಲಿಗೆ ಚಳ್ಳಕೆರೆ ನಂತರ ಚಿತ್ರದುರ್ಗ ಆ ನಂತರ ಚಿತ್ರಹಳ್ಳಿ ಗೇಟ್ ಗೆ ಬರಬೇಕಾಗುತ್ತದೆ ಎಂದರೆ ಸರಿ. ಆಗಾಗಿ ಲಾಕ್ ಡೌನ್ ಕಾಲದಲ್ಲಿ ಈ ಎಲ್ಲಾ ಜಾಗಗಳಲ್ಲಿ ಲಾಕ್ ಡೌನ ಸಂಬಂದ ಚೆಕ್ ಪೋಸ್ಟಗಳನ್ನು ನಿರ್ಮಿಸಲಾಗಿತ್ತು ಎಂದರೆ ಜಿಲ್ಲಾ ವ್ಯಾಪ್ತಿಯಲ್ಲಿ ಮಾತ್ರ ಮಾಡಲಾಗಿತ್ತು ಎಂದು ನುಡಿಯುತ್ತಾರೆ . ಚಿತ್ರದುರ್ಗ ಜಿಲ್ಲೆ ಎಂದರೆ ಸರಿ. ಅದು ಆ ರೀತಿ ಜಿಲ್ಲಾ ಬಾರ್ಡರ್ ನಲ್ಲಿ ರಾತ್ರಿ ಮತ್ತು ಹಗಲು ಚೆಕ್ ಪೋಸ್ಟ ಇರುತ್ತದೆ ಉಳಿದ ಕಡೆ ಹಗಲು ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ.

ಲಾಕ್ಡೌನ್ ನಿಯಮಾನುಸಾರ ಪ್ರತಿಯೊಂದು ಸ್ಟೇಶನ್, ಪ್ರತಿಯೊಂದು ತಾಲ್ಲೂಕು ಬಾರ್ಡರ್ ಪ್ರತಿಯೊಂದು ಜಿಲ್ಲಾ ಬಾರ್ಡರ ಎಲ್ಲಾ ಕಡೆ ಚೆಕ್ ಪೋಸ್ಟಗಳನ್ನು ನಿರ್ಮಿಸಿದ ಕಾರಣ ಯಾವುದೇ ವಾಹನವನ್ನು ಚೆಕ್ ಮಾಡಿಯೇ ಕಳುಹಿಸಿದ್ದರು ಎಂದರೆ ಅಂಬುಲೆನ್ಸ ಚೆಕ್ ಮಾಡುತ್ತಿರಲಿಲ್ಲ. ಖಾಸಗಿ ವಾಹನಗಳನ್ನು ಚೆಕ್ ಮಾಡುತಿದ್ದೆವು. ನಾನು ಹೇಳಿದ ಘಟನೆ ಆಯಿತು ಎಂದು ನಾನು ಹೇಳುವ ಸ್ಥಳ ಆ ಮೂಲಕ ಯಾವುದೇ ವಾಹನಗಳು ಹಾದುಹೋಗಬೇಕಾದಲ್ಲಿ ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣೆ ಮುಂದೆ ಹಾದು ಹೋಗಬೇಕು ಎಂದರೆ ಸರಿ.

ನಾವು ಸ್ಟೇಶನ್ ಹೌಸ್ ಡೈರಿಯಲ್ಲಿ ಗಸ್ತು ಎಲ್ಲಿಗೆ ಹೋಗಿದ್ದೆವು ಎಂದು ದಾಖಲಿಸುತ್ತೇವೆ. ಶಿವಗಂಗಾದ ಗಸ್ತಿನಲ್ಲಿದ್ದಾಗ ಈ ವಾಹನಗಳನ್ನು ಗಮನಿಸಿದೆ ಎಂದು ಹೇಳಿದ್ದು ನಮ್ಮ ಇಲಾಖಾ ವಾಹನದಲ್ಲಿ ಗಸ್ತು ಮಾಡುತಿದ್ದೆವು. ನಾನು ಇಲಾಖಾ ವಾಹನದಲ್ಲಿ ಹೋಗಿದ್ದ ಬಗ್ಗೆ ಪಂಚನಾಮೆ ನಿಪಿ-2 ರಲ್ಲಿ ನಮೂದು ಮಾಡಿಲ್ಲ . ಆತರ ಮಾಡುವ ಅವಶ್ಯಕತೆ ಇರುವುದಿಲ್ಲ.

ದಿಃ21-04-2020 ರಂದು ಸರ್ಕಾರಿ ವಾಹನದಲ್ಲಿ ಗಸ್ತು ಮಾಡುತಿದ್ದಾಗಿ ಹೇಳಿದ್ದು ಆಗ ಎರಡು ವಾಹನಗಳನ್ನು ಗಮನಿಸಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಎರಡು ವಾಹನಗಳನ್ನು ನಾನು ಗುಮನಿಸಿಲ್ಲ ಎಂದರೆ ಸರಿಯಲ್ಲ. ಮತ್ತು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಮತ್ತು ಸ್ಥಳದಲ್ಲಿ ಫೋಟೊ ಕೂಡ ತೆಗೆದೆ ಎಂದು ಹೇಳಿದ್ದು ನಮಗೆ ಡಿಜಿ ಟಲ್ ಕ್ಯಾಮೆರಾ ಒದಗಿಸಲಾಗಿದೆ ಎಂದರೆ ಸರಿ . ಅದನ್ನು ತಿಮ್ಮೇಶ ರವರ ಮೊಬೈಲ ನಿಂದ ತೆಗೆಯಲಾಗಿದೆ



ಅವರ ಬಳಿ ಆ ಮೊಬೈಲ್ ಇದೆ ಇಲ್ಲವೊ ನನಗೆ ಹೇಳಲಾಗುವುದಿಲ್ಲ. ಆ ರೀತಿ ಮೊಬೈಲ್ ನಲ್ಲಿ ಅಥವಾ ಡಿಜಿಟಲ್ ಕ್ಯಾಮೆರಾದಲ್ಲಿ ಫೋಟೊ ತೆಗೆದರೆ ಸ್ಥಳ ದಿನಾಂಕ ಸಮಯ ನಮೂದಾಗುತ್ತದೆ ಎಂದರೆ ಸೆಟ್ಟಿಂಗ್ ಮಾಡಿದ್ದಲ್ಲಿ ಮಾತ್ರ ಆ ರೀತಿ ಕಾಣಬಹುದು ಎಂದು ನುಡಿಯುತ್ತಾರೆ. ನಿಪಿ-3 ರಿಂದ 8 ರ ಫೋಟೊಗಳನ್ನು ಸ್ಥಳದಲ್ಲಿ ತೆಗೆದಿದ್ದಾಗಿ ಹೇಳಿದ್ದು ಹಾಗೂ ಸ್ಥಳದಲ್ಲಿಯೇ ವರದಿ ನಿಪಿ-1 ರಂತೆ ತಯಾರಿಸಿದ್ದಾಗಿ ಹಾಗೂ ನಿಪಿ-2 ರ ಮಹಜರನ್ನು ಕೂಡ ಪಂಚರ ಸಮಕ್ಷಮ ಸ್ಥಳದಲ್ಲಿ ತಯಾರಿಸಿದ್ದಾಗಿ ಹೇಳಿದ್ದು ಅವುಗಳನ್ನು ಈ ಕೇಸಿಗಾಗಿ ನಾನೇ ಠಾಣೆಯಲ್ಲಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ರಿಂದ 8 ಫೋಟೊಗಳಲ್ಲಿ ಮಾರುತಿ ಓಮಿನಿ ವಾಹನದ ನೊಂದಣಿ ಸಂಖ್ಯೆ ಮರೆಯಾಗಿದೆ ಕಾಣಿಸುತ್ತಿಲ್ಲ.

ನಾನು ನಿಪಿ-1 ರಲ್ಲಿ ವರದಿ ಮಾಡಿದೆ ಎಂದು ಹೇಳಿದ್ದು ಆ ರೀತಿ ನಿಪಿ-3 ರಿಂದ 8 ರಲ್ಲಿ ಅಂಬುಲೆನ್ಸ ನಿಂದ ಮಾರುತಿ ಓಮಿನಿ ವಾಹನಕ್ಕೆ ಮದ್ಯದ ಬಾಕ್ಸಗಳನ್ನು ಶಿಫ್ಟ ಮಾಡುತ್ತಿರುವ ಸಂದರ್ಬ ಕಾಣಿಸಿಲ್ಲ ಕಾರಣ ಅದು ಮಹಜರ ಕ್ರಮ ಜರುಗಿಸುವಾಗ ತೆಗೆದ ಫೋಟೊ ಗಳಾಗಿರುತ್ತವೆ. ಈ ನಿಪಿ-3 ರಿಂದ 8 ರ ಫೋಟೊಗಳನ್ನು ಹೊರತುಪಡಿಸಿ ಬೇರೆ ಫೋಟೊಗಳನ್ನು ತೆಗೆದಿಲ್ಲ. ಅದೇರೀತಿ ನಿಪಿ-3 ರಿಂದ 8 ರಲ್ಲಿ ಮಾರುತಿ ಓಮಿನಿ ವ್ಯಾನ್ ಗೆ ಮದ್ಯದ ಬಾಕ್ಸಗಳನ್ನು ಶಿಫ್ಟ ಮಾಡಿದ ಬಗ್ಗೆ ಕಂಡುಬರುತ್ತಿಲ್ಲ ಎಂದರೆ ನಿಪಿ-4 ರಲ್ಲಿ ಆ ರೀತಿ ಕಂಡು ಬರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ನಿಪಿ-4 ರಲ್ಲಿ ಕೂಡ ಮದ್ಯದ ಬಾಕ್ಸಗಳು ಶಿಫ್ಟ ಮಾಡಿದ್ದ ಬಗ್ಗೆಯಾಗಲಿ ಮತ್ತು ಈ ಎಲ್ಲಾ ಫೋಟೊಗಳಲ್ಲಿ ನಾನು ಹೇಳಿದಂತೆ ಮದ್ಯದ ಬಾಕ್ಸಗಳನ್ನು ಅಂಬುಲೆನ್ಸನಿಂದ ಓಮಿನಿಗೆ ಶಿಫ್ಟ ಮಾಡಿದ ಮತ್ತು ಮಾಡುತಿದ್ದ ಬಗ್ಗೆ ಎಲ್ಲೂ ಕಂಡುಬರುವುದಿಲ್ಲ ಆದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅದೇರೀತಿ ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ 1 ಮತ್ತು 2 ನೇ ಆರೋಪಿತರು ನಾನು ಹೇಳಿದಂತೆ ಸ್ಥಳದಲ್ಲಿ ಇದ್ದುದಾಗಿ ಅವರ ಹೆಸರು ವಿಳಾಸ ವಿಚಾರಿಸಿ ಪಡೆದುಕೊಂಡಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಹಾಗೆ ಆ ಸಂದರ್ಬದಲ್ಲಿ ಆರೋಪಿತರ ವಶದಿಂದ ಪಡೆದುಕೊಂಡಿದ್ದಾಗಿ ಹಾಗೂ ವಾಹನಗಳನ್ನು ಕೂಡ ಆರೋಪಿತರ ವಶದಿಂದ ಪಡೆದುಕೊಂಡಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ನಿಪಿ-2 ರಂತೆ ಮಹಜರ ಕ್ರಮ ಜರುಗಿಸಿಯೇ ಪಂಚರ ಸಮಕ್ಷಮ ಈ ಎಲ್ಲಾ ಮುಮಾ ಗಳನ್ನು ವಶಕ್ಕೆ ತೆಗೆದುಕೊಂಡಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಆರೋಪಿ ದುಮ್ಮಿ ಗ್ರಾಮದಲ್ಲಿ ಮತ್ತು 2 ನೇ ಆರೋಪಿ ರಾಮಘಟ್ಟ ಗ್ರಾಮದ ನಿವಾಸಿಗಳಾಗಿದ್ದು ಕೃಷಿಕರು ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ ಅವರು ಏನು ಕೆಲಸ ಮಾಡುತ್ತಾರೆ ಎಂದು ವಿಚಾರಿಸಿಲ್ಲ ಅವರ ಹೆಸರು ಊರು ಕೇಳಿ ಬರೆದುಕೊಂಡಿರುತ್ತೇನೆ. 1 ನೇ ಆರೋಪಿ ಜೀವನ ತನ್ನ ಕೃಷಿ ಕೆಲಸಕ್ಕಾಗಿ ಮಾತ್ರ ಬಳಸಲು ಮಾರುತಿ ಓಮಿನಿ ವಾಹನವನ್ನು ಹೊಂದಿದ್ದರು ಆಗಾಗಿ ಯಾವುದೇ ಉದ್ದೇಶಕ್ಕೆ ಅವರು ಬಳಸುವ

ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ 21-04-2020 ರಂದು ಯಾವುದೇ ರೀತಿ ವಾಹನಗಳನ್ನು ನಿಲ್ಲಿಸಿಕೊಂಡಿರಲಿಲ್ಲ ಮತ್ತು ಮದ್ಯವನ್ನು ಹೊಂದುವುದಾಗಲಿ



ಸಾಗಿಸುವುದಾಗಲಿ ಮಾಡಿಲ್ಲ ಮತ್ತು ಅದು ಮತ್ತೊಂದು ವಾಹನಕ್ಕೆ ಶಿಪ್ಟ ಮಾಡವುದಾಗಲಿ ಮಾಡಿಲ್ಲ ನಾನು ಈ ರೀತಿ ಅಂಕಿ ಸಂಖ್ಯೆಗಾಗಿ ಕಥೆ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ದಿಃ 21-04-2020 ರಂದು ಮದ್ಯಾಹ್ನದ ಸಮಯದಲ್ಲಿ 1 ನೇ ಆರೋಪಿ ಜೀವನರವರ ಮನೆಯಲ್ಲಿ ಆತನ ತಂದೆಗೆ ಆರೋಗ್ಯ ಸರಿಯಿಲ್ಲದಿದ್ದರಿಂದ ಜಿಲ್ಲಾ ಆಸ್ಪತ್ರೆಗೆ ಹೋಗಲು ಬೇರೆ ಎಲ್ಲಾ ಕಡೆ ಚೆಕ್ ಪೋಸ್ಟ ಗಳಲ್ಲಿ ಪರಿಶೀಲನೆಗೆ ಒಳಪಟ್ಟ ನಂತರವೇ ಸದರಿ ವ್ಯಕ್ತಿಯನ್ನು ಕರೆದುಕೊಂಡು ಹೋಗುತಿದ್ದಾಗ ಸದರಿ ವಾಹನವನ್ನು ನಿಲ್ಲಿಸಿ ನಾನು ಮಾಡಿದ ಒಂದು ಸುಳ್ಳು ಪ್ರಕರಣಕ್ಕೆ ಬೇಕಾಗಿ ಸದರಿ ವಾಹನ ಮತ್ತು ಆರೋಪಿಯನ್ನು ಅನಗತ್ಯವಾಗಿ ಪ್ರಕರಣದಲ್ಲಿ ಸಿಕ್ಕಿಸಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ 1 ಮತ್ತು 2 ನೇ ಆರೋಪಿತರು ಯಾವುದೇ ಕೃತ್ಯ ಮಾಡದೇ ಇದ್ದರೂ ಸಹ ಸುಳ್ಳು ವರದಿ ಮಾಡಿ ಪಂಚನಾಮೆ ಮು.ಮಾಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಆರೋಪಿತರು ಯಾವುದೇ ಕೃತ್ಯ ಎಸಗಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 3 ನೇ ಆರೋಪಿ ಪರ ವಕೀಲರಿಂದ**

ಚಿತ್ರಹಳ್ಳಿ ಗೇಟ್ ಹೆಚ್ ಡಿ ಪುರದಿಂದ 10 ರಿಂದ 12 ಕಿಮೀ ಆಗಬಹುದು. 3 ನೇ ಆರೋಪಿಯು ಅರೆಕಾಲಿಕ ಸರ್ಕಾರಿ ನೌಕರನಾಗಿ ಹೆಚ್ ಡಿ ಪುರ ಸರ್ಕಾರಿ ಆಸ್ಪತ್ರೆಯಲ್ಲಿ ಕಾಂಟ್ರಾಕ್ಟ ಬೇಸಿಸ್ ನಲ್ಲಿ ಅಂಬುಲೆನ್ಸಗೆ ಚಾಲಕನಾಗಿ ಕೆಲಸ ಮಾಡುತಿದ್ದನು ಎಂದರೆ ಸರಿ. ಆಗಾಗಿ ಬೆಳಗ್ಗೆ 8 ರಿಂದ 5 ಗಂಟೆವರೆಗೆ ಮಾತ್ರ ಆತನಿಗೆ ಕರ್ತವ್ಯ ನಿಗದಿಯಾಗಿತ್ತು ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಆಗಾಗಿ ಆತ ತನ್ನ ಕರ್ತವ್ಯ ಬೆಳಗ್ಗೆ 8 ಗೆ ಪ್ರಾರಂಬಿಸಿ ಸಂಜೆ 5 ಗಂಟೆಗೆ ಚಿತ್ರದುರ್ಗದ ತನ್ನ ಊರಿಗೆ ಹೊರಟು ಹೋಗುತಿದ್ದನು ಎಂದರೆ ಆ ಬಗ್ಗೆ ನನಗೆ ಹೇಳಲಾಗುವುದಿಲ್ಲ. ಅಂಬುಲೆನ್ಸನ ಕೀ ಅದರ ಮುಖ್ಯ ವೈದ್ಯಾದಿಕಾರಿಗಳ ಕಂಟ್ರೋಲನಲ್ಲಿ ಇರುತ್ತದೆ ಎಂದರೆ ಆ ಬಗ್ಗೆ ನನಗೆ ಹೇಳಲಾಗುವುದಿಲ್ಲ. ಆಗಾಗಿ ಸದರಿ ಕೀ ಯನ್ನು ಬೆಳಗ್ಗೆ 8 ರಿಂದ ಸಂಜೆ 5 ಗಂಟೆ ನಂತರ ಕೀ ಸದರಿ ವೈದ್ಯರಿಗೆ ಹಸ್ತಾಂತರಿಸುತ್ತಾರೆ ಎಂದರೆ ಆ ಬಗ್ಗೆ ತನಿಖಾದಿಕಾರಿಗೆ ಮಾಹಿತಿ ಇರುತ್ತದೆ . ನಾನು ಹೇಳಿದ ದಿನಾಂಕ ಮತ್ತು ಸಮಯದಂದು 3 ನೇ ಆರೋಪಿ ಅಂಬುಲೆನ್ಸ ನಲ್ಲಿ ಇರಲೇ ಇಲ್ಲ ಆದರೂ ಈ ಕೇಸಿಗಾಗಿ ಆತನ ಹೆಸರು ಸೇರಿಸಿ ಪ್ರಕರಣದಲ್ಲಿ ಜೋಡಿಸಿದ್ದೇನೆ ಎಂದರೆ ಸರಿಯಲ್ಲ.

3 ನೇ ಆರೋಪಿಗೂ ಮು.ಮಾ -1 ಮತ್ತು 2 ಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರಿಗೆ ನೋಟೀಸು ಕೊಟ್ಟಿರುತ್ತೇನೆ. ಆ ರೀತಿ ಯಾವುದೇ ನೊಟೀಸು ಕೊಟ್ಟಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರನ್ನು ರಸ್ತೆಯಲ್ಲಿ ಹೋಗುತಿದ್ದಾಗ ನಾನೇ ಕರೆದಿರುತ್ತೇನೆ . ಆ ರೀತಿ ಅವರು ರಸ್ತೆಯಲ್ಲಿ ಹೋಗುತ್ತಿರಲಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮತ್ತು ಠಾಣೆಯ ಅಂಕಿ ಸಂಖ್ಯೆಗೊಸ್ಕರ ಆರೋಪಿ ವಿರುದ್ದ ಒಂದು ಸುಳ್ಳು ಪ್ರಕರಣ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಸಂಗತಿಗಳು ಸುಳ್ಳು ಸಂಗತಿಗಳು ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 4 ಮತ್ತು 5 ನೇ ಆರೋಪಿ ಪರ ವಕೀಲರಿಂದ**

ನಾವು ಠಾಣೆಗೆ ಹೋದಾಗ ನಮ್ಮ ಇಲಾಖ ವಾಹನ ಬಳಸುವಾಗ ಠಾಣೆಯಿಂದ ಹೊರಟ ಸಮಯ  ಮತ್ತು ಸದರಿ ವಾಹನ ಎಲ್ಲೆಲ್ಲಿ ಹೋಗಿದೆ ಮತ್ತು ಎಷ್ಟು ಕಿ ಮೀ ಕ್ರಮಿಸಿದೆ ಎಂದು ಲಾಗ್



ಬುಕ್ ನಲ್ಲಿ ದಾಖಲಿಸಲಾಗುತ್ತದೆ ಎಂದರೆ ಅದನ್ನು ಚಾಲಕ ನಮೂದಿಸಬೇಕಾಗುತ್ತದೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ.  ಆ ದಿನ ತಿಮ್ಮೇಶ ಚಾಲಕನಾಗಿ ಇದ್ದನು.

ನಾನು ಬೆಳಗಿನ ಜಾವ 5 ಗಂಟೆಗೆ ನಾನು ಪೆಟ್ರೋಲಿಂಗ ಗೆ ಹೋದಾಗ  ಆರೋಪಿತರನ್ನು ಮತ್ತು ವಾಹನಗಳನ್ನು ನೋಡಿದ್ದಾಗಿ ಹೇಳಿದ್ದು ನಾನು ಕೂಡಲೇ ಎಸ್ ಹೆಚ್ ಓ ರವರಿಗೆ ಫೋನ್ ಮಾಡಿ ತಿಳಿಸಿಲ್ಲ  ವರದಿ ತಯಾರಿಸಿರುತ್ತೇನೆ. ವರದಿ ತಯಾರಿಸುವ ಕಾಲಕ್ಕೆ ಯಾವ್ಯಾವ ವಾಹನಗಳು ಎಷ್ಟು ಮದ್ಯದ ಬಾಕ್ಸಗಳು ಇದ್ದವು ಎಂದು ನಿಪಿ–1 ರಲ್ಲಿ ಕಾಣಿಸಿಲ್ಲ. ನಾನು ನಿಪಿ–1 ನ್ನು ತಯಾರಿಸುವ ಪೂರ್ವದಲ್ಲಿ ಅವುಗಳನ್ನು ಗಮನಿಸಿದ್ದೇನೆ. ನಾನು ವರದಿಯಲ್ಲಿ 4 ನೇ ಆರೋಪಿ ಅಂಬುಲೆನ್ಸನಲ್ಲಿದ್ದ ಎಂದು ಎಲ್ಲೂ ಹೇಳಿಲ್ಲ ಎಂದರೆ ಸರಿ . ನಿಪಿ–1 ರ ವರದಿಯನ್ನು ನಮ್ಮ ಠಾಣಾ ಸಿಬ್ಬಂದಿ ಮೂಲಕ ಠಾಣಾದಿಕಾರಿಗೆ ಕಳುಹಿಸಿಕೊಟ್ಟೆ ಎಂದು ಹೇಳಿದ್ದು ಅವರು ಪುನಃ ಸ್ಥಳಕ್ಕೆ ಬಂದಿರುತ್ತಾರೆ ಅವರು 6.15 ಕ್ಕೆ ಪುನಃ ಬಂದಿರುತ್ತಾರೆ .

ಯಾವುದೇ ವ್ಯಕ್ತಿ ವರದಿಯನ್ನು ಠಾಣೆಗೆ ಬಂದು ವರದಿಯನ್ನು ಕೊಟ್ಟಾಗ ಎಫ್ ಐ ಆರ್ ತಯಾರಿಸಲು 5 ರಿಂದ 10 ನಿಮಿಷ ಆಗಬಹುದು. ಎಸ್ ಹೆಚ್ ಓ ರವರು ಕ್ರೈಂ ನಂಬರ್ ಕರೆ ಮಾಡಿ ತಿಳಿಸಿರುತ್ತಾರೆ . ನಾನು ಮದ್ಯದ ಬಾಕ್ಸಗಳು ಇದ್ದವು ಎಂದು ಹೇಳಿದ್ದು ವಾಹನಗಳಲ್ಲಿ ಇದ್ದವು ಎಂದು ಹೇಳುವ ಬಾಕ್ಸ ಒಳಗೆ ಪೌಚಗಳು ಇದ್ದ ಬಗ್ಗೆ ನಿಪಿ– 3 ರಿಂದ 8 ರ ಪೊಟೊಗಳಲ್ಲಿ ಕಾಣಿಸಿಲ್ಲ ಎಂದರೆ ಸರಿ. ಪಂಚರ ಸಮಕ್ಷಮ ಬಾಕ್ಸಗಳ ಮೇಲೆ ಪಂಚರ ಸಹಿ ಇರುವ ಚೀಟಿ ಅಂಟಿಸಿಲ್ಲ ಆದರೆ ಚೀಲದ ಒಳಗೆ ಬಾಕ್ಸ ಹಾಕಿ ಚೀಲದ ಮೇಲೆ ಚೀಟಿ ಅಂಟಿಸಲಾಗಿದೆ . ಆ ರೀತಿ ಮು.ಮಾ –2 ರ ಚೀಲದ ಮೇಲೆ ಅಂಟಿಸಿರುವ ಚೀಟಿಯಲ್ಲಿ ಬಾಕ್ಸ ಗಳಲ್ಲಿ ಎಷ್ಟು ಪೌಚಗಳು ಇವೆ ಎಂದು ಕಾಣಿಸಿಲ್ಲ ಆದರೆ ನಿಪಿ–2 ರ ಪಂಚನಾಮೆಯಲ್ಲಿ ಕಾಣಿಸಿದ್ದೇನೆ. ಸ್ಯಾಂಪಲ್‌ಗೋಸ್ಕರ ಯಾವುದೇ ಪೌಚಗಳನ್ನು ಸ್ಥಳದಲ್ಲಿ ಓಪನ್ ಮಾಡಿಲ್ಲ. ಬಾಕ್ಸ ನ ಒಳಗೆ ಏನಿತ್ತು ಎಂದು ನಾನು ಒಡೆದು ನೋಡಿಲ್ಲ.

ಮಹಜರನಲ್ಲಿ ಕಾಣಿಸಿದಂತೆ ಬಾಕ್ಸ ನ ಮೇಲೆ 1 ನೇ ಬಾಕ್ಸನ ಮೇಲೆ ಬ್ಯಾಚ್ ನಂಬರ್ 220/2018 ಎಂದು ನಿಪಿ–2 ರಲ್ಲಿ ಕಾಣಿಸಿದ್ದು ಸದರಿ ಬಾಕ್ಸ ನ ಮೇಲೆ 220/ಎಲ್ 8 ಎಂದು ಇದೆ ಎಂದರೆ ಸರಿ. ಸದರಿ ಬಾಕ್ಸ ನ ಮೇಲೆ ಇರುವ ಎಫ್ ಟಿ ಆರ್ ನಂಬರ್ ಸದರಿ ಪಂಚನಾಮೆಯಲ್ಲಿ ಕಾಣಿಸಿಲ್ಲ ಎಂದರೆ ಸರಿ .

4 ನೇ ಆರೋಪಿ ಸಂತೋಷ ರವರು ಶಿವಗಂಗಾದ ಒಬ್ಬ ಸಂಬಂದಿಕರ ಮನೆಗೆ ಹೋಗಿದ್ದು ಬೆಳಗಿನ ಜಾವ ವಾಕ್ ಗಾಗಿ ನಡೆದುಕೊಂಡು ಬರುತಿದ್ದರು ಎಂದರೆ ಸರಿಯಲ್ಲ. ನನಗೆ ಈಗ ತೋರಿಸಿದ ನಿಪಿ–2 ರಲ್ಲಿ ಸ್ಕೆಚ್ ನಲ್ಲಿ ಎನ್ ಹೆಚ್ –13 ಪಕ್ಕ ಎಂದು ಕಾಣಿಸಿದೆ ಎಂದರೆ ಸರಿ . ಆದರೆ ನಿಪಿ–3 ರಿಂದ 8 ರ ಪೊಟೊಗಳಲ್ಲಿ ನಾನು ಹೇಳುವ ಜಾಗ ರಸ್ತೆಯಲ್ಲಿ ಇದೆ ಎಂದರೆ

ಸರಿಯಲ್ಲ. ನಾನು ಹೇಳಿದ 4 ನೇ ಆರೋಪಿ ಆನ್ ದ ವೇ ವಾಕ್ ಹೋಗುತಿದ್ದ ಕಾಲಕ್ಕೆ ಆತನನ್ನು ಈ ಪ್ರಕರಣದಲ್ಲಿ ಒಂದು ನಮ್ಮ ಠಾಣಾ ಅಂಕಿ ಸಂಖ್ಯೆ ತೋರಿಸುವ ಉದ್ದೇಶಕ್ಕೆ ಆತನನ್ನು ಈ ಪ್ರಕಣದಲ್ಲಿ ಸುಮ್ಮನೆ ಸಿಕ್ಕಿಸಿ ಆತ ನಾನು ಹೇಳಿದ ಮಧ್ಯದ ಬಾಕ್ಸಗಳನ್ನು ಅಂಬುಲೆನ್ಸ ನಿಂದ



ಓಮಿನಿಗೆ ಶಿಫ್ಟ ಮಾಡುತಿದ್ದನು ಎಂದು ಸುಳ್ಳು ಪ್ರಕರಣ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಚಾಸಾ-12 ರವರಿಗೆ ಆರೋಪಿತರು, ಪಂಚನಾಮೆ, ಮು.ಮಾಲುಗಳು, ಮತ್ತು ವಾಹನವನ್ನು ವಶಕ್ಕೆ ನೀಡಿದೆ ಎಂದು ಹೇಳಿದ ನಂತರದಲ್ಲಿ ಬೇರೆ ಯಾವುದೇ ದಾಖಲೆಗಳನ್ನು ನಾನು ಪರಿಶೀಲಿಸಿಲ್ಲ. ಅದೇ ರೀತಿ ದಿಃ 29-04-2020 ರಂದು ಯಾವುದೇ ಮರುಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

ಮು.ಮಾ -1 ರ ಒಟ್ಟು 14 ಬಾಕ್ಸಗಳು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತವೆ ಎಂದರೆ ಇರಬಹುದು. ಆಗಾಗಿ ಅಂತಹ ಬಾಕ್ಸಗಳನ್ನು ತಂದು ಅವುಗಳನ್ನು ಪರಿಶೀಲಿಸದೆ ಮು.ಮಾ-2 ನ್ನು ಉಪಯೋಗಿಸಿಕೊಂಡು ಅವುಗಳನ್ನು ಈ ಕೇಸಿಗಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಅದೇರೀತಿ ನಿಪಿ-2 ರ ಪಂಚನಾಮೆಯನ್ನು ಕೂಡ ನಮ್ಮ ಠಾಣೆಯಲ್ಲೆ ತಯಾರಿಸಿ ಪಂಚರನ್ನು ಠಾಣೆಗೆ ಕರೆಸಿ ಠಾಣೆಯಲ್ಲಿ ಸೃಷ್ಟಿ ಮಾಡಿದ ದಾಖಲೆ ಎಂದರೆ ಸರಿಯಲ್ಲ. ಮತ್ತು ನಾನು ಹೇಳಿದಂತೆ ಆರೋಪಿತರನ್ನು ಆ ದಿನ ಮಧ್ಯದ ಮಾಲುಗಳ ಸಹಿತ ನೋಡಿದ್ದಾಗಿ ಮತ್ತು ದಸ್ತಗಿರಿ ಮಾಡುವುದಾಗಿ ಮಾಡಿಲ್ಲ ನಾನು ಈ ಎಲ್ಲಾ ಸಂಗತಿಗಳನ್ನು ನಾನು ಸೃಷಿಸಿಕೊಂಡು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಮತ್ತು ನಾನು ಠಾಣಾ ಅಂಕಿ ಸಂಖ್ಯೆ ಗಾಗಿ ಸುಳ್ಳು ವರದಿ ನೀಡಿ ಸುಳ್ಳು ಪಂಚನಾಮೆ ತಯಾರಿಸಿ ಠಾಣೆಯಲ್ಲಿ ಎಲ್ಲವನ್ನು ಸೃಷ್ಟಿಸಿ ಆ ಪ್ರಕಾರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ತಕ್ಕಂತ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.